# ಭಾರತದ ಧ್ವಜ ಸಂಹಿತೆ

2002

ಭಾರತ ಸರ್ಕಾರ
ಗೃಹ ಸಚಿವಾಲಯ
ನವದೆಹಲಿ

Scanned by CamScanner

# ಭಾರತದ ಧ್ವಜ ಸಂಹಿತೆ

ನಮ್ಮ ಭಾರತದ ರಾಷ್ಟ್ರಧ್ವಜವು ಭಾರತೀಯರ ಭರವಸೆ ಮತ್ತು ಮಹತ್ವಾಕಾಂಕ್ಷೆಯ ಪ್ರತೀಕವಾಗಿದೆ. ಈ ಧ್ವಜವು ನಮ್ಮ ರಾಷ್ಟ್ರೀಯ ಹೆಮ್ಮೆ. ಕಳೆದ ಐದು ದಶಕಗಳಿಂದಲೂ ಹೆಚ್ಚಿನ ಅವಧಿಯಲ್ಲಿ ಸಶಸ್ತ್ರಪಡೆಯೂ ಸೇರಿದಂತೆ ಹಲವಾರು ಮಂದಿ ಈ ಧ್ವಜವು ವೈಭವದಿಂದ ಹಾರಾಡಲು ತಮ್ಮ ಜೀವನವನ್ನೇ ನಿರ್ಭೀತಿಯಿಂದ ತ್ಯಜಿಸಿದ್ದಾರೆ.

ನಮ್ಮ ರಾಷ್ಟ್ರ ಧ್ವಜದೆಡೆಗೆ ಇರುವ ಸಾರ್ವತ್ರಿಕ ವಾತ್ಸಲ್ಯ, ಗೌರವ ಹಾಗೂ ಸ್ವಾಮಿನಿಷ್ಠೆ ಅಪರಿಮಿತವಾದದ್ದು. ಹಾಗಿದ್ದಾಗ್ಯೂ ನಮ್ಮ ರಾಷ್ಟ್ರಧ್ವಜದ ಪ್ರದರ್ಶನಕ್ಕೆ ಅನ್ವಯಿಸುವಂತೆ ಇರುವ ನಿಯಮ, ಆಚರಣೆ ಮತ್ತು ಸಂಪ್ರದಾಯಗಳ ಕುರಿತಾಗಿ ನಮ್ಮ ಜನಸಮುದಾಯದಲ್ಲಿ ಮಾತ್ರವಲ್ಲದೇ ಸರ್ಕಾರಿ ಸಂಘ ಸಂಸ್ಥೆಗಳಲ್ಲೂ ಜಾಗೃತಿಯ ಕೊರತೆ ಎದ್ದುಕಾಣುತ್ತದೆ. ಕಾಲಕಾಲಕ್ಕೆ ಹೊರಡಿಸಲ್ಪಡುವ ಶಾಸನಬದ್ಧವಲ್ಲದ ಸೂಚನೆಗಳನ್ನು ಹೊರತುಪಡಿಸಿ, ರಾಷ್ಟ್ರಧ್ವಜದ ಪ್ರದರ್ಶನವನ್ನು **'ಲಾಂಛನ ಮತ್ತು ಅಭಿದಾನ (ಅಸಮರ್ಪಕ ಬಳಕೆಯ ತಡೆ) ಕಾಯಿದೆ, 1950'** (1950ರ ಸಂ. 12) ಮತ್ತು **'ರಾಷ್ಟ್ರ ಘನತೆಯೆಡೆಗಿನ ಅಪಮಾನ ತಡೆ ಕಾಯಿದೆ 1971'** (1971ರ ಸಂ. 69) ನಿರ್ವಹಿಸುತ್ತಿದೆ. **ಭಾರತದ ಧ್ವಜ ಸಂಹಿತೆ, 2002** ಇಂತಹ ಎಲ್ಲಾ ಕಾನೂನು, ಆಚರಣೆ, ಸಂಪ್ರದಾಯಗಳು ಮತ್ತು ಸೂಚನೆಗಳ ಒಟ್ಟು ಸ್ವರೂಪವಾಗಿದ್ದು, ಸಂಬಂಧಪಟ್ಟ ಎಲ್ಲರ ಒಳಿತು ಮತ್ತು ಮಾರ್ಗದರ್ಶನಕ್ಕಾಗಿ ರೂಪಿಸಲ್ಪಟ್ಟಿದೆ.

ಅನುಕೂಲಕರ ಅಗತ್ಯಗಳಿಗಾಗಿ **ಭಾರತದ ಧ್ವಜಸಂಹಿತೆ, 2002**ನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಸಂಹಿತೆಯ ವಿಭಾಗ-I ರಾಷ್ಟ್ರಧ್ವಜದ ಸಾಮಾನ್ಯ ವಿವರಣೆಗಳನ್ನು ಒಳಗೊಂಡಿರುತ್ತದೆ. ಸಂಹಿತೆಯ ವಿಭಾಗ- II ರಲ್ಲಿ ಸಾರ್ವಜನಿಕರು, ಖಾಸಗಿ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಇತ್ಯಾದಿಗಳಿಂದ ರಾಷ್ಟ್ರಧ್ವಜ ಬಳಕೆ/ಆರೋಹಣ ಕುರಿತಂತೆ ಇರುತ್ತದೆ. ಸಂಹಿತೆಯ ಭಾಗ- III ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಅವುಗಳ ಸಂಘ ಸಂಸ್ಥೆಗಳು ರಾಷ್ಟ್ರಧ್ವಜವನ್ನು ಬಳಕೆ ಮಾಡುವ ಬಗ್ಗೆ ಇರುತ್ತದೆ.

**'ಭಾರತದ ಧ್ವಜ ಸಂಹಿತೆ, 2002'**, ಜನವರಿ 26, 2002ರಿಂದ ಜಾರಿಗೆ ಬಂದಿದ್ದು, ಆ ಮೂಲಕ **'ಭಾರತದ ಧ್ವಜ ಸಂಹಿತೆ'** ರದ್ದುಗೊಂಡಿರುತ್ತದೆ.

## ವಿಭಾಗ I
## ಸಾಮಾನ್ಯ

1.1 ರಾಷ್ಟ್ರಧ್ವಜವು ತ್ರಿವರ್ಣದಿಂದ ಕೂಡಿದ್ದು, ಮೂರು ಸಮ ಪ್ರಮಾಣದ ಆಯತಾಕಾರ ಫಲಕ ಅಥವಾ ಉಪಫಲಕಗಳನ್ನು ಹೊಂದಿರಬೇಕು. ಮೇಲುಸ್ತರದ ಫಲಕವು ಭಾರತದ ಕೇಸರಿ ಬಣ್ಣ ಮತ್ತು ಕೆಳಭಾಗದ ಫಲಕವು ಹಸಿರು ಬಣ್ಣದ್ದಾಗಿರಬೇಕು, ನಡುವಿನ ಫಲಕವು ಶ್ವೇತವರ್ಣದ್ದಾಗಿದ್ದು, ಇದರ ನಡುಭಾಗದಲ್ಲಿ ನೌಕಾಪಡೆಯ ನೀಲಿ ಬಣ್ಣದ ಅಶೋಕ ಚಕ್ರವಿರಬೇಕು, ಈ ಅಶೋಕ ಚಕ್ರದಲ್ಲಿ 24 ಸರಳ, ಸಮಾನಾಂತರ ರೇಖೆಗಳಿರಬೇಕು. ಈ ಅಶೋಕ ಚಕ್ರವನ್ನು ಸ್ಕ್ರೀನ್ ಪ್ರಿಂಟಿಂಗ್ ಮೂಲಕ ಮುದ್ರಿಸಿರುವುದು ಅಪೇಕ್ಷಣೀಯ ಅಥವಾ ಹಾಗೆಯೇ ಮುದ್ರಿಸಿರಬಹುದು ಅಥವಾ ಅಚ್ಚಿನಿಂದ ಇಲ್ಲವೇ ಕಸೂತಿ ಮಾಡಿರಬಹುದು, ಈ ಚಕ್ರವು ಧ್ವಜದ ಮಧ್ಯಭಾಗದ ಶ್ವೇತವರ್ಣ ಫಲಕದಿಂದ ಎರಡೂ ದಿಕ್ಕಿಗೂ ದೃಗ್ಗೋಚರವಾಗುವಂತಿರಬೇಕು.

Scanned by CamScanner

ಭಾರತದ ರಾಷ್ಟ್ರಧ್ವಜವು ಕೈ ನೇಯ್ಗೆ/ ಉಣ್ಣೆಯ ಕೈ ನೇಯ್ಗೆ/ ಹತ್ತಿ/ ರೇಷ್ಮೆ ಖಾದಿ ವಸ್ತ್ರ ಮುಂತಾದವುಗಳಿಂದ ತಯಾರಿಸಿದ್ದಾಗಿರಬೇಕು.

1.2 ರಾಷ್ಟ್ರಧ್ವಜವು ಆಯತಾಕಾರ ಹೊಂದಿರಬೇಕು. ಧ್ವಜದ ಉದ್ದ ಮತ್ತು ಅಗಲದ ಅನುಪಾತವು 3:2 ರಷ್ಟಿರಬೇಕು.

1.3 ರಾಷ್ಟ್ರಧ್ವಜದ ಪ್ರಮಾಣೀಕೃತ ಗಾತ್ರವು ಈ ಕೆಳಗಿನಂತಿದೆ:

| ಧ್ವಜ ಗಾತ್ರ ಸಂ. | ವಿಸ್ತಾರ (ಮಿ.ಮೀ. ನಲ್ಲಿ) |
|---|---|
| 1. | 6300 X 4200 |
| 2. | 3600 X 2400 |
| 3. | 2700X1800 |
| 4. | 1800X1200 |
| 5. | 1350X900 |
| 6. | 900X600 |
| 7. | 450X300 |
| 8. | 225X150 |
| 9. | 150X100 |

1.4 ಧ್ವಜದ ಸಮರ್ಪಕ ಗಾತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು. ಅತಿಗಣ್ಯ ವಿಮಾನಗಳ ಹಾರಾಟಕ್ಕಾಗಿ 450X300 ಮಿ.ಮೀ ಗಾತ್ರ, 225X150 ಮಿ.ಮೀ ಗಾತ್ರ ಮೋಟಾರು ವಾಹನಗಳಿಗೆ ಹಾಗೂ 150X100 ಮಿ.ಮೀ ಗಾತ್ರ ಮೇಜಿನ ಮೇಲಿಡುವ ಧ್ವಜಗಳಿಗಾಗಿ ಎಂದು ಉದ್ದೇಶಿಸಲಾಗಿದೆ.

## ವಿಭಾಗ II

## ಸಾರ್ವಜನಿಕರು, ಖಾಸಗಿ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಇತ್ಯಾದಿ ಯವರಿಗಾಗಿ ಧ್ವಜಾರೋಹಣ/ ಪ್ರದರ್ಶನ/ ಬಳಕೆ

### ಭಾಗ 1

2.1 ಸಾರ್ವಜನಿಕರು, ಖಾಸಗಿ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಇತ್ಯಾದಿ ಯವರಿಗೆ ಧ್ವಜ ಪ್ರದರ್ಶನ ಮಾಡುವಲ್ಲಿ ಯಾವುದೇ ನಿಷಿದ್ಧವಿಲ್ಲ. ಆದರೆ, 'ಲಾಂಛನ ಮತ್ತು ಅಭಿದಾನ (ಅಸಮರ್ಪಕ ಬಳಕೆಯ ತಡೆ) ಕಾಯಿದೆ, 1950*' ಮತ್ತು

Scanned by CamScanner

ಪರಿಚ್ಛೇದ 2: ಈ ಕಾಯಿದೆಯಲ್ಲಿ ಸಂದರ್ಭದ ಅವಶ್ಯಕತೆಯು:

(a)ಪರಿಶಿಷ್ಟದಲ್ಲಿ ನಿಗದಿಯಾದಂತೆ 'ಲಾಂಛನ' ಎಂದರೆ ಯಾವುದೇ ಲಾಂಛನ, ಮುದ್ರೆ, ಧ್ವಜ, ಬಿರುದು, ಅಧಿಕೃತ ಲಾಂಛನ ಅಥವಾ ದೃಶ್ಯಾತ್ಮಕ ನಿರೂಪಣೆ.

ಪರಿಚ್ಛೇದ 3: ಆದ್ದಾಗ್ಯೂ, ಯಾವುದೇ ಕಾನೂನನ್ನು ಸಮಯಕ್ಕೆ ಅನುಗುಣವಾಗಿ ಯಾವುದೇ ವ್ಯಕ್ತಿಯು ಕೆಲವು ಸಂದರ್ಭಗಳನ್ನು ಉಳಿದು ಅಲ್ಲಗಳೆಯುವಂತಿಲ್ಲ, ಕೇಂದ್ರ ಸರ್ಕಾರ ನಿಗದಿಪಡಿಸಿದ ಅಂತಹ ಸಂದರ್ಭಗಳೆಂದರೆ ಬಳಕೆ ಅಥವಾ ಬಳಕೆಯ ಮುಂದುವರಿಕೆ, ಯಾವುದೇ ವಾಣಿಜ್ಯ ಉದ್ದೇಶ, ವ್ಯವಹಾರ, ಕರೆ ಅಥವಾ ಉದ್ಯೋಗ, ಅಥವಾ ಯಾವುದೇ ಪೇಟೆಂಟ್ ಅಥವಾ ವಿನ್ಯಾಸದ ಯಾವುದೇ ಟ್ರೇಡ್ ಗುರುತು, ಪರಿಶಿಷ್ಟದಲ್ಲಿ ನಿಗದಿಯಾದಂತೆ ಯಾವುದೇ ಹೆಸರು, ಲಾಂಛನ ಅಥವಾ ಯಾವುದೇ ವರ್ಣ ಅನುಕರಣೆಯನ್ನು ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಪರವಾಗಿ ಸರ್ಕಾರಿ ಅಧಿಕಾರಿಯ ಪೂರ್ವಾನುಮತಿಯಿಲ್ಲದೇ ಮಾಡುವಂತಿಲ್ಲ.

**ಟಿಪ್ಪಣಿ:** ಕಾಯಿದೆಯ ಪರಿಶಿಷ್ಟದಲ್ಲಿ ಭಾರತದ ರಾಷ್ಟ್ರಧ್ವಜವನ್ನು ಲಾಂಛನ ಎಂದು ನಿಗಿಪಡಿಸಲಾಗಿದೆ. 'ರಾಷ್ಟ್ರ ಘನತೆಯೆಡೆಗಿನ ಅಪಮಾನ ತಡೆ ಕಾಯಿದೆ 1971 **'ನ್ನು ಹೊರತುಪಡಿಸಿದಂತೆ ಹಾಗೂ ಇದಕ್ಕೆ ಸಂಬಂಧಿಸಿದಂತೆ ಜಾರಿಗೊಳಿಸಲಾದ ಇತರೆ ಯಾವುದೇ ಕಾನೂನು ಅನ್ವಯಗೊಳ್ಳುತ್ತದೆ. ಮೇಲೆ ತಿಳಿಸಿದ ಕಾಯಿದೆಗಳ ನಿಬಂಧನೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು

*i)* 'ಲಾಂಛನ ಮತ್ತು ಅಭಿದಾನ' (ಅಸಮರ್ಪಕ ಬಳಕೆಯ ತಡೆ) ಕಾಯಿದೆ, 1950ರನ್ನು ಉಲ್ಲಂಘಿಸಿ ಧ್ವಜವನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸುವಂತಿಲ್ಲ.

*ii)* ಧ್ವಜವು ಯಾವುದೇ ವ್ಯಕ್ತಿ ಇಲ್ಲವೇ ವಸ್ತುವಿಗೆ ನಮಿಸುವಂತಿರಬಾರದು ಅಥವಾ ಅಂತಹ ಸ್ಥಿತಿಯಲ್ಲಿರಬಾರದು.

---

**** 'ರಾಷ್ಟ್ರ ಘನತೆಯೆಡೆಗಿನ ಅಪಮಾನ ತಡೆ ಕಾಯಿದೆ 1971**

ಪರಿಚ್ಛೇದ 2: ಯಾವುದೇ ಸಾರ್ವಜನಿಕ ಸ್ಥಳ ಅಥವಾ ಇನ್ನಾವುದೇ ಸಾರ್ವಜನಿಕ ಮುಕ್ತ ಸ್ಥಳಗಳಲ್ಲಿ ಯಾವುದೇ ವ್ಯಕ್ತಿಯು ರಾಷ್ಟ್ರಧ್ವಜವನ್ನು ಸುಟ್ಟರೆ, ನಷ್ಟಗೊಳಿಸಿದರೆ, ವಿರೂಪಗೊಳಿಸಿದರೆ, ಮುದುಡಿದರೆ, ವಿಕಾರಗೊಳಿಸಿ, ನಾಶಪಡಿಸಿದರೆ, ತಿರಸ್ಕರಿಸಿದರೆ ಅಥವಾ ಧ್ವಜಕ್ಕೆ ನಿಂದನೆ (ವಾಚ್ಯವಾಗಿ, ಮಾತಿನಲ್ಲಿ ಅಥವಾ ಬರೆಯುವದರ ಮೂಲಕ ಇಲ್ಲವೇ ವರ್ತನೆಯ ಮೂಲಕ) ಮಾಡಿದರೆ, ಭಾರತದ ರಾಷ್ಟ್ರಧ್ವಜ ---------- ಅಥವಾ ಇನ್ನಾವುದೇ ಭಾಗ, ಇವು ಶಿಕ್ಷಾರ್ಹವಾಗಿದ್ದು, ಮೂರು ವರ್ಷಗಳವರೆಗೆ ಸೆರೆವಾಸ ಅಥವಾ ದಂಡ ಅಥವಾ ಸೆರೆವಾಸ ಮತ್ತು ದಂಡ ಇವೆರಡನ್ನೂ ನೀಡಬಹುದಾಗಿದೆ.

**ವಿವರಣೆ 1.** ಅಸಮ್ಮತಿ ಅಥವಾ ಟೀಕೆಯನ್ನು ವ್ಯಕ್ತಪಡಿಸುವುದು, ---------- ಭಾರತದ ರಾಷ್ಟ್ರ ಧ್ವಜ ಅಥವಾ ---------- ನ್ನು ಪಡೆದುಕೊಳ್ಳಲು ಸರ್ಕಾರದ ಇನ್ನಾವುದೇ ಕ್ರಮಗಳು ಅಥವಾ ಕಾನೂನುಬದ್ಧವಾಗಿ ಭಾರತದ ರಾಷ್ಟ್ರಧ್ವಜಕ್ಕೆ ಮಾರ್ಪಾಡು ತರುವುದು ಈ ವಿಭಾಗದಲ್ಲಿ ಅಪರಾಧವಲ್ಲ.

Scanned by CamScanner

ವಿವರಣೆ 2. 'ಭಾರತದ ರಾಷ್ಟ್ರಧ್ವಜ'ದ ಅನಿಸಿಕೆಯು ಯಾವುದೇ ಚಿತ್ರ, ಚಿತ್ರಕಲೆ, ರೇಖಾಚಿತ್ರ ಅಥವಾ ಛಾಯಾಚಿತ್ರ ಅಥವಾ ಇತರೆ ರೀತಿಯಲ್ಲಿ ಧ್ವಜವನ್ನು ದೃಗ್ಗೋಚರಗೊಳಿಸುವಂತಹದ್ದು, ಅಥವಾ ಯಾವುದೇ ಭಾಗ ಅಥವಾ ಭಾಗಗಳು, ಯಾವುದೇ ವಸ್ತುವಿನಿಂದ ಮಾಡಲ್ಪಟ್ಟಿರಬಹುದು ಅಥವಾ ಯಾವುದೇ ವಸ್ತುವಿನ ಮೇಲೆ ಪ್ರತಿನಿಧಿಸುವಂತಹದ್ದು.

ವಿವರಣೆ 3. 'ಸಾರ್ವಜನಿಕ ಸ್ಥಳ' ಎಂದರೆ ಯಾವುದೇ ಸ್ಥಳವು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿದ್ದು, ಸಾರ್ವಜನಿಕ ಬಳಕೆಗೆ ಒಳಪಡುವಂತಹದ್ದು, ಇದು ಸಾರ್ವಜನಿಕ ವಾಹನಗಳನ್ನೂ ಒಳಗೊಂಡಿರುತ್ತದೆ.

iii) ಸಾರ್ವಜನಿಕ ಕಟ್ಟಡಗಳ ಮೇಲೆ ಧ್ವಜವನ್ನು ಎಂದಿಗೂ ಅರ್ಧ ಕಂಬದವರೆಗೂ ಹಾರಿಸುವಂತಿಲ್ಲ. ಸರ್ಕಾರದ ಆದೇಶದ ಅನುಸಾರವಾಗಿ ಹಾಗೂ ಕೆಲವು ಸನ್ನಿವೇಶಗಳಲ್ಲಿ ಮಾತ್ರ ಹೀಗೆ ಹಾರಿಸಬೇಕಾಗುತ್ತದೆ.

iv) ಧ್ವಜವನ್ನು ಖಾಸಗಿ ಅಂತ್ಯಕ್ರಿಯೆಯೂ ಸೇರಿದಂತೆ ಯಾವುದೇ ಸಂದರ್ಭದಲ್ಲಿಯೂ ಪರದೆ ಅಥವಾ ಪರದೆಯ ಮಾದರಿಯಲ್ಲಿ ಬಳಸುವಂತಿಲ್ಲ.

v) ವಸ್ತ್ರ ಅಥವಾ ಯಾವುದೇ ವಿಧವಾದ ಸಮವಸ್ತ್ರ, ಕಸೂತಿಯಾಗಿ ಅಥವಾ ಮೆತ್ತೆಗಳು (ಮೆದುಹಾಸಿಗೆ), ಕರವಸ್ತ್ರ ಅಥವಾ ಯಾವುದೇ ಉಡುಪುಗಳ ಭಾಗವಾಗಿ ಧ್ವಜವನ್ನು ಬಳಸಬಾರದು.

vi) ಧ್ವಜದ ಮೇಲೆ ಯಾವುದೇ ಲಿಪಿ ಇಲ್ಲವೇ ಅಕ್ಷರಗಳು ಇರಬಾರದು.

vii) ಧ್ವಜವನ್ನು ಯಾವುದೇ ವಸ್ತುವನ್ನು ತೆಗೆದುಕೊಳ್ಳಲು, ಕೊಡಲು, ಇರಿಸಿಕೊಳ್ಳಲು ಅಥವಾ ಹೊತ್ತೊಯ್ಯಲು ಬುಟ್ಟಿಯಂತೆ ಬಳಕೆ ಮಾಡಬಾರದು;ರಾಷ್ಟ್ರೀಯ ಸಮಾರಂಭಗಳಾದ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವ ಮುಂತಾದ ವಿಶೇಷ ಸಂದರ್ಭಗಳಲ್ಲಿ ಆಚರಣೆಯ ಅಂಗವಾಗಿ ಧ್ವಜದೊಳಗೆ ಪುಷ್ಪದಳಗಳನ್ನು ಇರಿಸುವುದಕ್ಕೆ ಯಾವುದೇ ಆಕ್ಷೇಪಣೆಗಳಿರುವುದಿಲ್ಲ.

viii) ಪುತ್ಥಳಿ ಅನಾವರಣ ಸಂದರ್ಭ ಮೊದಲಾದವುಗಳಲ್ಲಿ ಧ್ವಜವನ್ನು ಪ್ರತ್ಯೇಕವಾಗಿ ಮತ್ತು ಅಂತರವನ್ನು ಕಾಯ್ದುಕೊಂಡು ಪ್ರದರ್ಶಿಸಬಹುದು. ಧ್ವಜವನ್ನು ಪುತ್ಥಳಿ ಇಲ್ಲವೇ ಸ್ಮಾರಕಕ್ಕೆ ಹೊದಿಕೆ ಅಥವಾ ಮುಚ್ಚಲು ಬಳಸಬಾರದು.

ix) ಭಾಷಣದ ಮೇಜನ್ನು ಮುಚ್ಚಲು ಇಲ್ಲವೇ ಭಾಷಣದ ವೇದಿಕೆಯನ್ನು ಅಲಂಕರಿಸಲು ಧ್ವಜವನ್ನು ಬಳಸಬಾರದು.

x) ಧ್ವಜವನ್ನು ಉದ್ದೇಶಪೂರ್ವಕವಾಗಿ ಭೂಮಿಯನ್ನು ಅಥವಾ ನೆಲವನ್ನು ಅಥವಾ ನೀರಿನಲ್ಲಿ ಈಜುವಂತೆ ಬಿಡಬಾರದು.

xi) ಯಾವುದೇ ವಾಹನ, ರೈಲು, ದೋಣಿ ಅಥವಾ ವಿಮಾನದ ಬಾನೆಟ್, ಮೇಲ್ಬದಿ, ಇಕ್ಕೆಲಗಳು ಅಥವಾ ಹಿಂಬದಿಯಲ್ಲಿ ಅಲಂಕಾರಗೊಳಿಸಲು ಧ್ವಜವನ್ನು ಬಳಸಬಾರದು.

xii) ಕಟ್ಟಡದ ಹೊದಿಕೆಯಾಗಿ ಧ್ವಜವನ್ನು ಬಳಕೆ ಮಾಡಬಾರದು;

Scanned by CamScanner

xiii) ಉದ್ದೇಶಪೂರ್ವಕವಾಗಿ ಧ್ವಜದಲ್ಲಿ ಕೇಸರಿ ಬಣ್ಣವನ್ನು ಕೆಳಗೆ ಬರುವಂತೆ ಎಂದರೆ ಧ್ವಜವನ್ನು ತಲೆಕೆಳಗಾಗಿ ಪ್ರದರ್ಶಿಸಬಾರದು.

2.2 ಸಾರ್ವಜನಿಕ ಸದಸ್ಯರು, ಖಾಸಗಿ ಸಂಸ್ಥೆ ಅಥವಾ ಯಾವುದೇ ಶೈಕ್ಷಣಿಕ ಸಂಸ್ಥೆಯು ರಾಷ್ಟ್ರಧ್ವಜವನ್ನು ಘನತೆ ಮತ್ತು ಗೌರವಪೂರ್ವಕವಾಗಿ ಎಲ್ಲಾ ದಿನಗಳಲ್ಲೂ ಮತ್ತು ಸಂದರ್ಭಗಳಲ್ಲೂ/ ಆಚರಣೆಗಳಲ್ಲೂ ಪ್ರದರ್ಶಿಸಬಹುದು ಇಲ್ಲವೇ ಆರೋಹಣ ಮಾಡಬಹುದು.

i) ರಾಷ್ಟ್ರಧ್ವಜ ಪ್ರದರ್ಶನ ಸಂದರ್ಭದಲ್ಲಿ ಅದನ್ನು ಗೌರವಪೂರ್ಣ ಸ್ಥಾನದಲ್ಲಿ ಹಾಗೂ ಅಂತರ ಕಾಯ್ದುಕೊಂಡು ಪ್ರದರ್ಶಿಸಬೇಕು.

ii) ಹಾನಿಗೊಳಗಾದ ಮತ್ತು ಅಸ್ತವ್ಯಸ್ತಗೊಂಡ ಧ್ವಜವನ್ನು ಪ್ರದರ್ಶಿಸಬಾರದು.

iii) ಧ್ವಜವನ್ನು ಇನ್ನಾವುದೇ ಧ್ವಜ ಅಥವಾ ಧ್ವಜಗಳೊಂದಿಗೆ ಏಕಸಮಯದಲ್ಲಿ ಒಂದೇ ಹಗ್ಗದೊಂದಿಗೆ ಹಾರಿಸಬಾರದು.

iv) ಈ ಸಂಹಿತೆಯ ವಿಭಾಗ III, ಪರಿಚ್ಛೇದ IX ರಲ್ಲಿನ ಪ್ರಕಾರವಲ್ಲದೇ ಧ್ವಜವನ್ನು ಯಾವುದೇ ವಾಹನದ ಮೇಲೂ ಹಾರಿಸಬಾರದು.

v) ಅಧ್ಯಕ್ಷರ ವೇದಿಕೆಯಲ್ಲಿ ಧ್ವಜವನ್ನು ಹಾರಿಸುವುದೇ ಆಗಿದ್ದಲ್ಲಿ ಅದು, ಭಾಷಣಕಾರರು, ಸಭಿಕರನ್ನುದ್ದೇಶಿಸಿ ಮಾತನಾಡುವಾಗ ಆತನ ಬಲಭಾಗಕ್ಕೆ ಬರುವಂತೆ ಅಥವಾ ಗೋಡೆಗೆ ಬರುವಂತೆ, ಇಲ್ಲವೇ ಭಾಷಣಕಾರನ ಹಿಂದೆ ಮತ್ತು ಮೇಲ್ಭಾಗದಲ್ಲಿ ಬರುವಂತೆ ಪ್ರದರ್ಶಿಸಬೇಕು.

vii) ಧ್ವಜವನ್ನು ಗೋಡೆಯ ಮೇಲೆ ಪ್ರದರ್ಶಿಸಿದ್ದಲ್ಲಿ ಅಥವಾ ಸಮತಲವಾಗಿ ಹಾಕಿದ್ದಲ್ಲಿ ಕೇಸರಿ ಬಣ್ಣದ ಭಾಗವು ಮೇಲ್ಭಾಗದಲ್ಲಿ ಬರಬೇಕು. ಒಂದು ವೇಳೆ ಲಂಬವಾಗಿ ಪ್ರದರ್ಶನ ಮಾಡಿದ್ದಲ್ಲಿ ಕೇಸರಿ ಬಣ್ಣವು ಬಲಭಾಗಕ್ಕೆ ಇರಬೇಕು (ಎಂದರೆ ವ್ಯಕ್ತಿಯು ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದಲ್ಲಿ, ಆತನ ಹಿಂಭಾಗಕ್ಕೆ ಧ್ವಜವನ್ನು ಪ್ರದರ್ಶಿಸಿದ್ದರೆ, ಕೇಸರಿ ಬಣ್ಣದ ಭಾಗವು ಆತನ ಎಡಗಡೆಗೆ ಬರುವಂತಿರಬೇಕು).

viii) ಈ ಸಂಹಿತೆಯ ವಿಭಾಗ–I ರಲ್ಲಿ ನಿಗದಿಗೊಳಿಸಿರುವಂತೆ ಧ್ವಜದ ಪ್ರದರ್ಶನ ಇರಬೇಕು.

ix) ರಾಷ್ಟ್ರಧ್ವಜಕ್ಕಿಂತಲೂ ಎತ್ತರವಾಗಿ ಅಥವಾ ಅದರ ಮೇಲೆ ಇಲ್ಲವೇ ಪಕ್ಕಕ್ಕೆ ಬೇರೆ ಯಾವುದೇ ಧ್ವಜ ಇಲ್ಲವೇ ಪತಾಕೆಯನ್ನು ಹಾರಿಸಿರಬಾರದು. ಧ್ವಜದ ಮೇಲೆ ಯಾವುದೇ ವಸ್ತು, ಹೂಗಳು, ಹೂಗುಚ್ಛ ಅಥವಾ ಲಾಂಛನವನ್ನು ಇರಿಸಬಾರದು. ಅಥವಾ ಇಂತಹ ವಸ್ತುಗಳನ್ನು ಧ್ವಜಸ್ತಂಭದ ಮೇಲೆ ಇರಿಸಿರಬಾರದು.

x) ಧ್ವಜವನ್ನು ಹಾರ, ತೋರಣ ಇಲ್ಲವೇ ಯಾವುದೇ

Scanned by CamScanner

xiii) ಉದ್ದೇಶಪೂರ್ವಕವಾಗಿ ಧ್ವಜದಲ್ಲಿ ಕೇಸರಿ ಬಣ್ಣವನ್ನು ಕೆಳಗೆ ಬರುವಂತೆ ಎಂದರೆ ಧ್ವಜವನ್ನು ತಲೆಕೆಳಗಾಗಿ ಪ್ರದರ್ಶಿಸಬಾರದು.

2.2 ಸಾರ್ವಜನಿಕ ಸದಸ್ಯರು, ಖಾಸಗಿ ಸಂಸ್ಥೆ ಅಥವಾ ಯಾವುದೇ ಶೈಕ್ಷಣಿಕ ಸಂಸ್ಥೆಯು ರಾಷ್ಟ್ರಧ್ವಜವನ್ನು ಘನತೆ ಮತ್ತು ಗೌರವಪೂರ್ವಕವಾಗಿ ಎಲ್ಲಾ ದಿನಗಳಲ್ಲೂ ಮತ್ತು ಸಂದರ್ಭಗಳಲ್ಲೂ/ ಆಚರಣೆಗಳಲ್ಲೂ ಪ್ರದರ್ಶಿಸಬಹುದು ಇಲ್ಲವೇ ಆರೋಹಣ ಮಾಡಬಹುದು.

i) ರಾಷ್ಟ್ರಧ್ವಜ ಪ್ರದರ್ಶನ ಸಂದರ್ಭದಲ್ಲಿ ಅದನ್ನು ಗೌರವಪೂರ್ಣ ಸ್ಥಾನದಲ್ಲಿ ಹಾಗೂ ಅಂತರ ಕಾಯ್ದುಕೊಂಡು ಪ್ರದರ್ಶಿಸಬೇಕು.

ii) ಹಾನಿಗೊಳಗಾದ ಮತ್ತು ಅಸ್ತವ್ಯಸ್ತಗೊಂಡ ಧ್ವಜವನ್ನು ಪ್ರದರ್ಶಿಸಬಾರದು.

iii) ಧ್ವಜವನ್ನು ಇನ್ನಾವುದೇ ಧ್ವಜ ಅಥವಾ ಧ್ವಜಗಳೊಂದಿಗೆ ಏಕಸಮಯದಲ್ಲಿ ಒಂದೇ ಹಗ್ಗದೊಂದಿ ಹಾರಿಸಬಾರದು.

iv) ಈ ಸಂಹಿತೆಯ ವಿಭಾಗ III, ಪರಿಚ್ಛೇದ IX ರಲ್ಲಿನ ಪ್ರಕಾರವಲ್ಲದೇ ಧ್ವಜವನ್ನು ಯಾವು ವಾಹನದ ಮೇಲೂ ಹಾರಿಸಬಾರದು.

v) ಅಧ್ಯಕ್ಷರ ವೇದಿಕೆಯಲ್ಲಿ ಧ್ವಜವನ್ನು ಹಾರಿಸುವುದೇ ಆಗಿದ್ದಲ್ಲಿ ಅದು, ಭಾಷಣಕಾ ಸಭಿಕರನ್ನುದ್ದೇಶಿಸಿ ಮಾತನಾಡುವಾಗ ಆತನ ಬಲಭಾಗಕ್ಕೆ ಬರುವಂತೆ ಅಥವಾ ಗೋ ಬರುವಂತೆ, ಇಲ್ಲವೇ ಭಾಷಣಕಾರನ ಹಿಂದೆ ಮತ್ತು ಮೇಲ್ಭಾಗದಲ್ಲಿ ಬರುವಂತೆ ಪ್ರದರ್ಶಿಸಬೇ

vii) ಧ್ವಜವನ್ನು ಗೋಡೆಯ ಮೇಲೆ ಪ್ರದರ್ಶಿಸಿದ್ದಲ್ಲಿ ಅಥವಾ ಸಮತ ಹಾಕಿದ್ದಲ್ಲಿ ಕೇಸರಿ ಬಣ್ಣದ ಭಾಗವು ಮೇಲ್ಭಾಗದಲ್ಲಿ ಬರಬೇಕು. ಒಂದು ವೇಳೆ ಲಂ ಪ್ರದರ್ಶನ ಮಾಡಿದ್ದಲ್ಲಿ ಕೇಸರಿ ಬಣ್ಣವು ಬಲಭಾಗಕ್ಕೆ ಇರಬೇಕು (ಎಂದರೆ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದಲ್ಲಿ, ಆತನ ಹಿಂಭಾಗಕ್ಕೆ ಧ್ವಜವನ್ನು ಪ್ರದರ್ಶಿಸಿದ್ದರೆ, ಬಣ್ಣದ ಭಾಗವು ಆತನ ಎಡಗಡೆಗೆ ಬರುವಂತಿರಬೇಕು).

viii) ಈ ಸಂಹಿತೆಯ ವಿಭಾಗ–I ರಲ್ಲಿ ನಿಗದಿಗೊಳಿಸಿರುವಂತೆ ಧ್ವಜದ ಪ್ರದರ್ಶನ ಇರಬೇಕು.

ix) ರಾಷ್ಟ್ರಧ್ವಜಕ್ಕಿಂತಲೂ ಎತ್ತರವಾಗಿ ಅಥವಾ ಅದರ ಮೇಲೆ ಇಲ್ಲವೇ ಪಕ್ಕಕ್ಕೆ ಬೇರೆ ಯಾವ ಇಲ್ಲವೇ ಪತಾಕೆಯನ್ನು ಹಾರಿಸಿರಬಾರದು. ಧ್ವಜದ ಮೇಲೆ ಯಾವುದೇ ವಸ್ತು, ಹೂಗುಚ್ಛ ಅಥವಾ ಲಾಂಛನವನ್ನು ಇರಿಸಬಾರದು. ಅಥವಾ ಇಂತಹ ವಸ್ತುಗಳನ್ನು ಮೇಲೆ ಇರಿಸಿರಬಾರದು.

x) ಧ್ವಜವನ್ನು ಹಾರ, ತೋರಣ ಇಲ್ಲವೇ ಯಾವುದೇ ವಿಧವಾದ ಅಲಂಕಾರ ಬಳಸಬಾರದು.

Scanned by CamScanner

xi) ಪ್ರಮುಖ ರಾಷ್ಟ್ರ ಹಬ್ಬಗಳು, ಸಾಂಸ್ಕೃತಿಕ ಮತ್ತು ಕ್ರೀಡಾ ಸಂದರ್ಭಗಳಲ್ಲಿ ಕಾಗದದಲ್ಲಿ ತಯಾರಿಸಲಾದ ಧ್ವಜವನ್ನು ಸಾರ್ವಜನಿಕರು ಹಾರಿಸುತ್ತಾರೆ. ಹೀಗಿದ್ದಲ್ಲಿ, ಕಾಗದದ ಧ್ವಜಗಳನ್ನು ಕಾರ್ಯಕ್ರಮ ಮುಗಿದ ನಂತರ ನೆಲದ ಮೇಲೆ ಬಿಸಾಡುವುದು ಅಥವಾ ತ್ಯಜಿಸುವುದನ್ನು ಮಾಡಬಾರದು. ಸಾಧ್ಯವಾದಷ್ಟೂ ಧ್ವಜಗಳನ್ನು ಘನತೆಯೊಂದಿಗೆ ಖಾಸಗಿಯಾಗಿ ವಿಲೇವಾರಿ ಮಾಡಬೇಕು.

xii) ಧ್ವಜವನ್ನು ಮುಕ್ತವಾಗಿ ಪ್ರದರ್ಶನ ಮಾಡಿದ್ದಾಗ ಎಂತಹದ್ದೇ ಹವಾಮಾನ ಸಂದರ್ಭದಲ್ಲಿಯೂ ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ಹಾರಿಸಬಹುದಾಗಿದೆ.

xiii) ಹಾನಿಗೊಂಡಿರುವ ಧ್ವಜವನ್ನು ಯಾವುದೇ ರೀತಿಯಲ್ಲೂ ಭದ್ರಪಡಿಸಿಡಬಾರದು ಅಥವಾ ಪ್ರದರ್ಶಿಸಬಾರದು.

xiii) ಧ್ವಜವು ಹಾನಿ ಇಲ್ಲವೇ ಶಿಥಿಲಗೊಂಡಿದ್ದ ಪರಿಸ್ಥಿತಿಯಲ್ಲಿ ಅದನ್ನು ಖಾಸಗಿಯಾಗಿ, ಇಡಿಯಾಗಿ ನಾಶಪಡಿಸಬೇಕು. ಇಲ್ಲವೇ ಧ್ವಜದ ಘನತೆಗೆ ಕುಂದು ಬಾರದ ರೀತಿಯಲ್ಲಿ ಇಲ್ಲವೇ ಅದನ್ನು ಸುಟ್ಟು ಹಾಕುವುದು ಅಪೇಕ್ಷಣೀಯ.

## ವಿಭಾಗ III

## ಅಧಿಕೃತ ಪ್ರದರ್ಶನ

3.3 ವಿಭಾಗ I ಒಳಗೊಂಡಿರುವ ನಿಬಂಧನೆಗಳಿಗೆ ಸಂಬಂಧಿಸಿದಂತೆ, ಎಲ್ಲಾ ಸರ್ಕಾರ ಮತ್ತು ಅವುಗಳ ಸಂಘ/ ಸಂಸ್ಥೆಗಳು ಈ ವಿಭಾಗದಲ್ಲಿರುವ ನಿಬಂಧನೆಗಳನ್ನು ಕಡ್ಡಾಯವಾಗಿ ಅನುಸರಿಸಬೇಕಾಗಿರುತ್ತದೆ.

3.4 ಅಧಿಕೃತ ಪ್ರದರ್ಶನದ ಎಲ್ಲಾ ಸಂದರ್ಭಗಳಲ್ಲಿಯೂ ಭಾರತದ ಮಾನಕ ಸಂಸ್ಥೆ ಮತ್ತು ಅದರ ಪ್ರಮಾಣಿತ ಗುರುತನ್ನು ಹೊಂದಿರುವ ನಿಗದಿತ ಧ್ವಜವನ್ನು ಬಳಸಬೇಕು. ಇನ್ನಿತರ ಸಂದರ್ಭಗಳಲ್ಲಿಯೂ ಅಂತಹ ಸಮರ್ಪಕ ಗಾತ್ರದ ಧ್ವಜವನ್ನು ಹಾರಿಸುವುದು ಅಪೇಕ್ಷಣೀಯವಾಗಿದೆ.

## ಭಾಗ III

## ಸರಿಯಾದ ಪ್ರದರ್ಶನ

3.5. ಧ್ವಜ ಪ್ರದರ್ಶನ ಎಲ್ಲೇ ಆಗಿರಬಹುದು ಅಂತಹ ಪ್ರದೇಶದಲ್ಲಿ ಧ್ವಜಕ್ಕೆ ಘನತೆಯ ಸ್ಥಾನವನ್ನು ನೀಡಿ ಅಂತರವನ್ನು ಕಾಯ್ದುಕೊಳ್ಳಬೇಕಾಗಿದೆ.

3.6 ಯಾವುದೇ ಸಾರ್ವಜನಿಕ ಕಟ್ಟಡದ ಮೇಲಾದರೂ ಧ್ವಜಾರೋಹಣ ಸಂದರ್ಭದಲ್ಲಿ ಅಂತಹ ಕಟ್ಟಡದ ಮೇಲೆ ಈ ಸಂಹಿತೆಯಲ್ಲಿ ಒದಗಿಸಿರುವ ಕೆಲವು ಸನ್ನಿವೇಶಗಳನ್ನು ಉಳಿದು ಭಾನುವಾರ ಮತ್ತು ಇತ ರಜಾದಿನಗಳೂ ಸೇರಿದಂತೆ ಧ್ವಜವು ಹಾರಾಡುತ್ತಿರಬೇಕು. ಎಂತಹದ್ದೇ ಹವಾಮಾನ ಸಂದರ್ಭದಲ್ಲಿಯ ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ಹಾರಿಸಬಹುದಾಗಿದೆ. ಇಂತಹ ಕಟ್ಟಡದ ಮೇ ಹಾರಿಸಲಾಗುವ ಧ್ವಜವನ್ನು ಪ್ರಮುಖ ವಿಶೇಷ ಸಂದರ್ಭಗಳಲ್ಲಿ ಮಾತ್ರ ರಾತ್ರಿಯಲ್ಲಿಯ ಉಳಿಸಬಹುದಾಗಿದೆ.

Scanned by CamScanner

3.7 ಧ್ವಜವನ್ನು ಯಾವಾಗಲೂ ತ್ವರಿತವಾಗಿ ಏರಿಸಬೇಕು ಮತ್ತು ಸಾವಕಾಶ ಹಾಗೂ ವಿಜೃಂಭಣೆಯಿಂದ ಕೆಳಗಿಳಿಸಬೇಕಾಗುತ್ತದೆ. ಧ್ವಜವನ್ನು ಹಾರಿಸುವ ಸಂದರ್ಭದಲ್ಲಿ ಸಮರ್ಪಕ ವಾದ್ಯಗಳನ್ನು ಮೊಳಗಿಸಬಹುದು. ಈ ವಾದ್ಯಗಳು ಕ್ಷೀಣಗತಿಯಲ್ಲಿ ನಿರಂತರವಾಗಿ ಮೊಳಗುವಂತೆ ನೋಡಿಕೊಳ್ಳಬೇಕು.

3.8 ಧ್ವಜವನ್ನು ಲಂಬವಾಗಿ ಹಾಕಬೇಕೆಂದಾಗ ಇಲ್ಲವೇ ಕಿಟಕಿಯ ಸರಳು, ಕಟ್ಟಡದ ಮೊಗಸಾಲೆ ಅಥವಾ ಮುಂಭಾಗದಲ್ಲಿ ಹಾಕಬೇಕಾದಾಗ ಕೇಸರಿ ಬಣ್ಣವು ಸ್ತಂಬದ ಕೊನೆಗೆ ಬರುವಂತೆ ನೋಡಿಕೊಳ್ಳಬೇಕು.

3.9 ಧ್ವಜವನ್ನು ಗೋಡೆಗೆ ಹಾಕಿದ್ದಲ್ಲಿ ಮತ್ತು ಲಂಬವಾಗಿ ಪ್ರದರ್ಶನ ಮಾಡುವಲ್ಲಿ ಕೇಸರಿ ಬಣ್ಣದ ಭಾಗವು ಬಲಭಾಗಕ್ಕೆ ಬರಬೇಕು, ಎಂದರೆ ವ್ಯಕ್ತಿಯ ಎಡಬದಿಗೆ ಇರುವಂತೆ ಪ್ರದರ್ಶಿಸಬೇಕು.

3.10 ಭಾಷಣಕಾರರ ವೇದಿಕೆಯ ಮೇಲೆ ಧ್ವಜವನ್ನು ಪ್ರದರ್ಶಿಸಿದಾಗ ಕೇಸರಿ ಬಣ್ಣವು ಬಲಭಾಗಕ್ಕೆ ಇರಬೇಕು (ಎಂದರೆ ವ್ಯಕ್ತಿಯು ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದಲ್ಲಿ, ಆತನ ಹಿಂಭಾಗಕ್ಕೆ ಧ್ವಜವನ್ನು ಪ್ರದರ್ಶಿಸಿದ್ದರೆ, ಕೇಸರಿ ಬಣ್ಣದ ಭಾಗವು ಆತನ ಎಡಗಡೆಗೆ ಬರುವಂತಿರಬೇಕು).

3.11 ಪುತ್ಥಳಿಯ ಅನಾವರಣದಂತಹ ಸಂದರ್ಭದಲ್ಲಿ ಧ್ವಜವನ್ನು ಪ್ರತ್ಯೇಕವಾಗಿ ಮತ್ತು ಅಂತರ ಕಾಯ್ದುಕೊಂಡು ಪ್ರದರ್ಶಿಸಬೇಕು.

3.12 ಮೋಟಾರು ವಾಹನದ ಮೇಲೆ ಧ್ವಜವೊಂದನ್ನೇ ಪ್ರದರ್ಶಿಸುವ ಸಂದರ್ಭದಲ್ಲಿ ಧ್ವಜವನ್ನು ಕಿರುಸ್ತಂಭದ ಮೇಲೆ, ಬಾನೆಟ್ ಮಧ್ಯಭಾಗದಲ್ಲಿ ಇಲ್ಲವೇ ಬಲಭಾಗದಲ್ಲಿ ಹಾರಿಸಬೇಕು.

3.13 ಧ್ವಜವನ್ನು ಮೆರವಣಿಗೆ ಇಲ್ಲವೇ ಪಥಸಂಚಲನ ಸಮಯದಲ್ಲಿ ಬಲಭಾಗಕ್ಕೆ ಪಥಸಂಚಲನ ಹೊರಡಬೇಕು, ಎಂದರೆ ಧ್ವಜದ ಬಲಭಾಗಕ್ಕೆ ಅಥವಾ ಇತರ ಧ್ವಜಗಳ ಸಾಲುಗಳಿದ್ದಲ್ಲಿ, ಸಾಲಿನ ಮಧ್ಯ ಮುಂಭಾಗದಿಂದ ಧ್ವಜದ ಮೆರವಣಿಗೆ ಮಾಡಬೇಕು.

## ಭಾಗ IV

### ಸರಿಯಲ್ಲದ ಪ್ರದರ್ಶನ

3.14 ಹಾನಿಗೊಂಡ ಅಥವಾ ಅಸ್ತವ್ಯಸ್ತಗೊಂಡಿರುವ ಧ್ವಜವನ್ನು ಪ್ರದರ್ಶಿಸಬಾರದು.

3.15 ಧ್ವಜವು ಯಾವುದೇ ವ್ಯಕ್ತಿ ಇಲ್ಲವೇ ವಸ್ತುವಿಗೆ ನಮಿಸುವಂತಿರಬಾರದು ಅಥವಾ ಅಂತಹ ಸ್ಥಿತಿಯಲ್ಲಿರಬಾರದು.

3.16 ರಾಷ್ಟ್ರಧ್ವಜಕ್ಕಿಂತಲೂ ಎತ್ತರವಾಗಿ ಅಥವಾ ಅದರ ಮೇಲೆ ಇಲ್ಲವೇ ಪಕ್ಕಕ್ಕೆ ಬೇರೆ ಯಾವುದೇ ಧ್ವಜ ಇಲ್ಲವೇ ಪತಾಕೆಯನ್ನು ಹಾರಿಸಿರಬಾರದು. ಧ್ವಜದ ಮೇಲೆ ಯಾವುದೇ ವಸ್ತು, ಹೂಗಳು, ಹೂಗುಚ್ಛ ಅಥವಾ ಲಾಂಛನವನ್ನು ಇರಿಸಬಾರದು. ಅಥವಾ ಇಂತಹ ವಸ್ತುಗಳನ್ನು ಧ್ವಜಸ್ತಂಭದ ಮೇಲೆ ಇರಿಸಿರಬಾರದು.

3.17 ಧ್ವಜವನ್ನು ಹಾರ, ತೋರಣ ಇಲ್ಲವೇ ಯಾವುದೇ ವಿಧವಾದ ಅಲಂಕಾರ ವಸ್ತುವಾಗಿ ಬಳಸಬಾರದು.

3.18 ಭಾಷಣದ ಮೇಜನ್ನು ಮುಚ್ಚಲು ಇಲ್ಲವೇ ಭಾಷಣದ ವೇದಿಕೆಯನ್ನು ಅಲಂಕರಿಸಲು ಧ್ವಜವನ್ನು ಬಳಸಬಾರದು.

3.19 ಧ್ವಜದಲ್ಲಿ ಕೇಸರಿ ಬಣ್ಣವನ್ನು ಕೆಳಗೆ ಬರುವಂತೆ ಎಂದರೆ ಧ್ವಜವನ್ನು ತಲೆಕೆಳಗಾಗಿ ಪ್ರದರ್ಶಿಸಬಾರದು.

Scanned by CamScanner

3.20 ಧ್ವಜವನ್ನು ಉದ್ದೇಶಪೂರ್ವಕವಾಗಿ ಭೂಮಿಯನ್ನು ಅಥವಾ ನೆಲವನ್ನುಅಥವಾ ನೀರಿನಲ್ಲಿ ಈಜುವಂತೆ ಬಿಡಬಾರದು.

3.21 ಹಾನಿಗೊಂಡಿರುವ ಧ್ವಜವನ್ನು ಯಾವುದೇ ರೀತಿಯಲ್ಲೂ ಭದ್ರಪಡಿಸಿಡಬಾರದು ಅಥವಾ ಪ್ರದರ್ಶಿಸಬಾರದು.

## ಭಾಗ V

### ದುರ್ಬಳಕೆ

3.22 ರಾಜ್ಯ/ಸೇನೆ/ ಕೇಂದ್ರ ಅರೆ ಸೇನಾ ಪಡೆಗೆ ಸಂಬಂಧಿಸಿದ ಅಂತ್ಯಕ್ರಿಯೆಯನ್ನು ಹೊರತುಪಡಿಸಿ ಧ್ವಜವನ್ನು ಇನ್ನಾವುದೇ ವಿಧದಲ್ಲಿ ಹೊದಿಕೆಯಾಗಿ ಬಳಸಬಾರದು.

3.23 ವಾಹನ, ರೈಲು ಇಲ್ಲವೇ ದೋಣಿಯ ಬಾನೆಟ್, ಮೇಲ್ಭಾಗ, ಇಕ್ಕೆಲಗಳು ಅಥವಾ ಹಿಂಭಾಗದಲ್ಲಿ ಧ್ವಜವನ್ನು ಪ್ರದರ್ಶಿಸುವಂತಿಲ್ಲ.

3.24 ಧ್ವಜವು ಹಾನಿಗೊಂಡಿದ್ದರೆ ಅಥವಾ ಶಿಥಿಲಾವಸ್ಥೆಯಲ್ಲಿದ್ದರೆ ಅಂತಹ ಧ್ವಜವನ್ನು ಬಳಕೆ ಮಾಡಬಾರದು ಹಾಗೂ ಭದ್ರಪಡಿಸಿಡಬಾರದು.

3.25 ಧ್ವಜವು ಹಾನಿ ಇಲ್ಲವೇ ಶಿಥಿಲಗೊಂಡಿದ್ದ ಪರಿಸ್ಥಿತಿಯಲ್ಲಿ ಅದನ್ನು ಖಾಸಗಿಯಾಗಿ, ಇಡಿಯಾಗಿ ನಾಶಪಡಿಸಬೇಕು. ಇಲ್ಲವೇ ಧ್ವಜದ ಘನತೆಗೆ ಕುಂದು ಬಾರದ ರೀತಿಯಲ್ಲಿ ಇಲ್ಲವೇ ಅದನ್ನು ಸುಟ್ಟು ಹಾಕುವುದು ಅಪೇಕ್ಷಣೀಯ.

3.26 ಧ್ವಜವನ್ನು ಕಟ್ಟಡದ ಹೊದಿಕೆಯಾಗಿ ಬಳಸಬಾರದು.

3.27 ವಸ್ತ್ರ ಅಥವಾ ಯಾವುದೇ ವಿಧವಾದ ಸಮವಸ್ತ್ರ, ಕಸೂತಿಯಾಗಿ ಅಥವಾ ಮೆತ್ತೆಗಳು (ಮೆದುಹಾಸಿಗೆ), ಕರವಸ್ತ್ರ ಅಥವಾ ಪೆಟ್ಟಿಗೆಗಳ ಮೇಲೆ ಮುದ್ರಿಸಿರಬಾರದು.

3.28 ಧ್ವಜದ ಮೇಲೆ ಯಾವುದೇ ಲಿಪಿ ಇಲ್ಲವೇ ಅಕ್ಷರಗಳು ಇರಬಾರದು.

3.29 ಧ್ವಜವನ್ನು ಯಾವುದೇ ಜಾಹೀರಾತಿನ ರೂಪದಲ್ಲಿ ಬಳಸಬಾರದು ಇಲ್ಲವೇ ಧ್ವಜಾರೋಹಣ ಮಾಡಿರುವ ಧ್ವಜಸ್ತಂಭಕ್ಕೆ ಬೇರೆ ಯಾವುದೇ ಜಾಹೀರಾತನ್ನು ಕಟ್ಟಿರಬಾರದು.

3.30 ಧ್ವಜವನ್ನು ಯಾವುದೇ ವಸ್ತುವನ್ನು ತೆಗೆದುಕೊಳ್ಳಲು, ಕೊಡಲು, ಇರಿಸಿಕೊಳ್ಳಲು ಅಥವಾ ಹೊತ್ತೊಯ್ಯಲು ಬುಟ್ಟಿಯಂತೆ ಬಳಕೆ ಮಾಡಬಾರದು.
ರಾಷ್ಟ್ರೀಯ ಸಮಾರಂಭಗಳಾದ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವ ಮುಂತಾದ ವಿಶೇಷ ಸಂದರ್ಭಗಳಲ್ಲಿ ಆಚರಣೆಯ ಅಂಗವಾಗಿ ಧ್ವಜದೊಳಗೆ ಪುಷ್ಪದಳಗಳನ್ನು ಇರಿಸುವುದಕ್ಕೆ ಯಾವುದೇ ಆಕ್ಷೇಪಣೆಗಳಿರುವುದಿಲ್ಲ.

Scanned by CamScanner

## ಭಾಗ VI

### ಗೌರವ ವಂದನೆ

3.31 ಧ್ವಜಾರೋಹಣ ಸಂದರ್ಭದಲ್ಲಿ ಅಥವಾ ಧ್ವಜ ಇಳಿಸುವ ಅಥವಾ ಪಥಸಂಚಲನದಲ್ಲಿ ರಾಷ್ಟ್ರಧ್ವಜ ಹಾದು ಹೋಗುವಾಗ ಅಲ್ಲಿ ಉಪಸ್ಥಿತರಿರುವ ಎಲ್ಲರೂ ಎದ್ದುನಿಂತು, ಧ್ವಜದೆಡೆಗೆ ಮುಖ ಮಾಡಿ ಗೌರವ ಸೂಚಿಸಬೇಕು. ಸಮವಸ್ತ್ರದಲ್ಲಿರುವವರು ಧ್ವಜಕ್ಕೆ ಪ್ರತಿವಂದನೆ ಸಲ್ಲಿಸಬೇಕು. ಧ್ವಜವು ಸಂಚಲಿಸುತ್ತಿದ್ದಾಗ, ಅಲ್ಲಿರುವ ಜನರು ಎದ್ದು ನಿಲ್ಲಬೇಕು ಅಥವಾ ತಮ್ಮ ಮುಂದೆ ಸಾಗುತ್ತಿರುವ ತ್ರಿವರ್ಣ ಧ್ವಜಕ್ಕೆ ವಂದನೆ ಸಲ್ಲಿಸಬೇಕು. ಅಲ್ಲಿ ಹಾಜರಿರುವ ಗೌರವಾನ್ವಿತರು ಮಾತ್ರವೇ ನಿಗದಿತ ಸಮವಸ್ತ್ರವಿಲ್ಲದೆಯೂ ಸಹ ವಂದನೆ ಸ್ವೀಕರಿಸಬಹುದಾಗಿದೆ.

## ಭಾಗ VIII

### ಸಾರ್ವಜನಿಕ ಕಟ್ಟಡಗಳು/ ಅಧಿಕೃತ ನಿವಾಸಗಳ ಮೇಲಿನ ಪ್ರದರ್ಶನ

3.39 ಸಾಮಾನ್ಯವಾಗಿ ರಾಷ್ಟ್ರಧ್ವಜವನ್ನು ಪ್ರಮುಖ ಸಾರ್ವಜನಿಕ ಕಟ್ಟಡಗಳು ಎಂದರೆ ಉಚ್ಚ ನ್ಯಾಯಾಲಯ, ಸಚಿವಾಲಯ, ಆಯುಕ್ತರ ಕಚೇರಿಗಳು, ಜಿಲ್ಲಾಧಿಕಾರಿಗಳು, ಸೆರೆಮನೆ ಮತ್ತು ಜಿಲ್ಲಾ ಮಂಡಳಿಗಳ ಕಚೇರಿಗಳು, ಪುರಸಭೆಗಳು, ಜಿಲ್ಲಾ ಪರಿಷತ್ತುಗಳು ಹಾಗೂ ಇಲಾಖೆ/ ಸಾರ್ವಜನಿಕ ವಲಯ ಅಧೀನ ಕಟ್ಟಡಗಳ ಮೇಲೆ ಹಾರಿಸಲಾಗುತ್ತದೆ.

## ಭಾಗ XI

### ಧ್ವಜವನ್ನು ಅರ್ಧಸ್ತಂಭಕ್ಕೆ ಇಳಿಸುವುದು

3.50 ಈ ಕೆಳಗಿನ ಗೌರವಾನ್ವಿತ ಹುದ್ದೆಗಳ ಗಣ್ಯರ ಮರಣದ ಸಂದರ್ಭದಲ್ಲಿ ರಾಷ್ಟ್ರಧ್ವಜವನ್ನು ಅರ್ಧಸ್ತಂಭಕ್ಕೆ ಇಳಿಸಲಾಗುವುದು. ಹೀಗೆ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಇಳಿಸುವ ಸ್ಥಳಗಳನ್ನು ಈ ಕೆಳಗೆ ನೀಡಲಾಗಿದೆ:

| ಗೌರವಾನ್ವಿತ ಗಣ್ಯರು | ಸ್ಥಳ ಅಥವಾ ಸ್ಥಳಗಳು |
|---|---|
| ರಾಷ್ಟ್ರಪತಿ<br>ಉಪರಾಷ್ಟ್ರಪತಿ<br>ಪ್ರಧಾನಮಂತ್ರಿ | ಭಾರತದಾದ್ಯಂತ |
| ಲೋಕಸಭಾಧ್ಯಕ್ಷರು<br>ಭಾರತದ ಮುಖ್ಯ ನ್ಯಾಯಾಧೀಶರು | ದೆಹಲಿ |
| ಕೇಂದ್ರ ಸಂಪುಟ ಸಚಿವರು | ದೆಹಲಿ ಮತ್ತು ರಾಜ್ಯ ರಾಜಧಾನಿಗಳು |
| ರಾಜ್ಯ ಸಚಿವರು ಅಥವಾ ಕೇಂದ್ರದ ಉಪಸಚಿವರು | ದೆಹಲಿ |
| ರಾಜ್ಯಪಾಲರು<br>ಉಪರಾಜ್ಯಪಾಲರು<br>ರಾಜ್ಯದ ಮುಖ್ಯಮಂತ್ರಿ<br>ಕೇಂದ್ರಾಡಳಿತ ಪ್ರದೇಶದ ಮುಖ್ಯಮಂತ್ರಿ<br>ರಾಜ್ಯದ ಸಂಪುಟ ಸಚಿವರು | ರಾಜ್ಯ ಅಥವಾ ಸಂಬಂಧಿತ ಕೇಂದ್ರಾಡಳಿತ ಪ್ರದೇಶಗಳು. ಸಂಬಂಧಿತ ರಾಜ್ಯದ ರಾಜಧಾನಿ |

Scanned by CamScanner

3.51 ಯಾವುದೇ ಗೌರವಾನ್ವಿತ ವ್ಯಕ್ತಿಯ ಸಾವಿನ ಸುದ್ದಿಯು ಅಪರಾಹ್ನ ದೊರೆತಲ್ಲಿ, ಧ್ವಜವನ್ನು ಅದೇ ದಿನವೇ ಅರ್ಧಕ್ಕೆ ಇಳಿಸಲಾಗುತ್ತದೆ. ಮೇಲೆ ತಿಳಿಸಿರುವ ಸ್ಥಳ ಅಥವಾ ಸ್ಥಳಗಳಲ್ಲಿ ಅದೇ ದಿನದ ಸೂರ್ಯಾಸ್ತದ ಮುನ್ನ ಅಂತ್ಯಕ್ರಿಯೆ ಜರುಗದೇ ಇದ್ದಲ್ಲಿ ನಂತರದ ದಿನವೂ ಧ್ವಜವನ್ನು ಅರ್ಧಕ್ಕೇ ಇಳಿಸಲಾಗಿರುತ್ತದೆ.

3.52 ಮೇಲೆ ತಿಳಿಸಿರುವಂತೆ, ಗೌರವಾನ್ವಿತ ವ್ಯಕ್ತಿಯ ಅಂತ್ಯಕ್ರಿಯೆ ಜರುಗುವ ಸ್ಥಳದಲ್ಲಿ ಧ್ವಜವನ್ನು ಅರ್ಧಕ್ಕೆ ಇಳಿಸಿರಬೇಕಾಗಿರುತ್ತದೆ.

3.53 ಯಾವುದೇ ಗೌರವಾನ್ವಿತ ವ್ಯಕ್ತಿಯ ಮರಣದಂದು ರಾಜ್ಯವು ಶೋಕಾಚರಣೆಯಲ್ಲಿದ್ದರೆ, ಇಡೀ ಅವಧಿಯವರೆಗೂ ಧ್ವಜವನ್ನು ಅರ್ಧಕ್ಕೆ ಇಳಿಸಿರಬೇಕು. ಒಂದು ವೇಳೆ ಕೇಂದ್ರದ ಗೌರವಾನ್ವಿತ ವ್ಯಕ್ತಿಗಳು ಅಸ್ತಂಗತವಾಗಿ, ಭಾರತದಾದ್ಯಂತ ಶೋಕಾಚರಣೆ ಆಚರಿಸುವ ಸಂದರ್ಭದಲ್ಲಿಯೂ ಧ್ವಜವನ್ನು ಅರ್ಧಕ್ಕೆ ಇಳಿಸಿರಬೇಕು. ಕೇಂದ್ರಾಡಳಿತ ಪ್ರದೇಶದ ಗೌರವಾನ್ವಿತ ವ್ಯಕ್ತಿಯ ಮರಣ ಸಂದರ್ಭದ ಶೋಕಾಚರಣೆಯಲ್ಲಿ ಸಂಬಂಧಿತ ಕೇಂದ್ರಾಡಳಿತ ಪ್ರದೇಶದಲ್ಲಿ ಧ್ವಜವನ್ನು ಅರ್ಧಕ್ಕೆ ಇಳಿಸಬೇಕಾಗುತ್ತದೆ.

3.54 ಪ್ರತ್ಯೇಕ ಪ್ರಕರಣಗಳಲ್ಲಿ ವಿದೇಶಿ ಗಣ್ಯರ ಮರಣ ಸಂದರ್ಭದಲ್ಲಿನ ರಾಜ್ಯ ಶೋಕಾಚರಣೆಗೆ ಗೃಹ ಸಚಿವಾಲಯವು ವಿಶೇಷ ಸೂಚನೆಗಳನ್ನು ಹೊರಡಿಸಿ, ಅಗತ್ಯವಿದ್ದಾಗ ಧ್ವಜವನ್ನು ಅರ್ಧಕ್ಕೆ ಹಾರಿಸಬೇಕಾಗುತ್ತದೆ.

3.55 ಈ ಮೇಲಿನ ನಿಬಂಧನೆಗಳನ್ನು ಮೀರದಂತೆ, ಒಂದು ವೇಳೆ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಮಹಾತ್ಮ ಗಾಂಧಿಯವರ ಜಯಂತಿ, ರಾಷ್ಟ್ರೀಯ ಸಪ್ತಾಹ (6ರಿಂದ 13ನೇ ಏಪ್ರಿಲ್, ಜಲಿಯನ್ ವಾಲಾಬಾಗ್ ಹುತಾತ್ಮರ ಸ್ಮರಣೆಗಾಗಿ) ಅಥವಾ ಭಾರತ ಸರ್ಕಾರ ಸೂಚಿಸಿರುವ ನಮ್ಮ ತ್ರಿವರ್ಣ ಧ್ವಜವು ಉತ್ತುಂಗದಲ್ಲಿ ಹಾರಾಡುವಂತಹ ದಿನದಂದು ಅಥವಾ ರಾಜ್ಯಗಳ ಪ್ರಕರಣಕ್ಕೆ ಸಂಬಂಧಿಸಿದಂತೆ, ರಾಜ್ಯ ಸಂಸ್ಥಾಪನಾ ದಿನಗಳಂದು ರಾಷ್ಟ್ರಧ್ವಜವನ್ನು ಅರ್ಧಕ್ಕೆ ಹಾರಿಸಬಾರದು. ಆದರೆ ಗಣ್ಯರ ಶವವನ್ನಿರಿಸಿರುವ ಸರ್ಕಾರಿ ಕಟ್ಟಡಗಳ ಮೇಲೆ ಮಾತ್ರ ಅರ್ಧಕ್ಕೆ ಹಾರಿಸಬಹುದಾಗಿದೆ. ಶವವನ್ನು ಆ ಕಟ್ಟಡದಿಂದ ಹೊರತೆಗೆದ ನಂತರ ಪುನಃ ಧ್ವಜವನ್ನು ಪೂರ್ತಿ ಹಾರಿಸಬೇಕಾಗುತ್ತದೆ.

3.56 ಶೋಕಾಚರಣೆಯನ್ನು ಧ್ವಜವನ್ನು ಹಿಡಿದುಕೊಂಡು ಪಥಸಂಚಲನ ಇಲ್ಲವೇ ಮೆರವಣಿಗೆಯ ಮೂಲಕ ಆಚರಿಸಿದಾಗ ಭರ್ಜಿಯ ತುದಿಗೆ ಎರಡು ಕಪ್ಪು ಪಟ್ಟಿಗಳನ್ನು ಲಗತ್ತಿಸಿರಬೇಕು. ಕಪ್ಪು ಪಟ್ಟಿಗಳನ್ನು ಸರ್ಕಾರದ ಆದೇಶದ ಮೇರೆಗೆ ಮಾತ್ರವೇ ಬಳಸತಕ್ಕದ್ದು.

3.57 ಧ್ವಜವನ್ನು ಅರ್ಧಕ್ಕೆ ಇಳಿಸುವ ಮುನ್ನ ಧ್ವಜಸ್ತಂಭದ ತುತ್ತತುದಿಯವರೆಗೂ ಹಾರಿಸಬೇಕು, ನಂತರ ಅದನ್ನು ಅರ್ಧಕ್ಕೆ ಇಳಿಸಬೇಕು. ಆದರೆ ನಿಗದಿತ ದಿನದಂದು ಧ್ವಜವನ್ನು ಅರ್ಧಕ್ಕೆ ಇಳಿಸುವುದಕ್ಕೂ ಮುನ್ನ ಅದನ್ನು ತುತ್ತತುದಿಯವರೆಗೂ ಏರಿಸಿರಬೇಕು.

ಟಿಪ್ಪಣಿ: ಧ್ವಜವನ್ನು ಅರ್ಧ ಕಂಬಕ್ಕೆ ಹಾರಿಸುವುದು ಎಂದರೆ ಧ್ವಜವನ್ನು ಧ್ವಜದ ಆದಿ ಮತ್ತು ಅಂತ್ಯದ ನಡುವಣ ಅಂತರದಲ್ಲಿ ಹಾರಿಬಿಡುವುದು ಮತ್ತು ಧ್ವಜ ಸ್ತಂಭದಲ್ಲಿ ಅರ್ಧಕ್ಕೆ ಗುರುತು ಮಾಡಿರುವ ಸ್ಥಳದಲ್ಲಿ ಹಾರಿಸುವುದು. ಒಂದು ವೇಳೆ ಗುರುತು ಮಾಡದಿದ್ದರೆ, ಧ್ವಜ ಸ್ತಂಭದ ಅರ್ಧಕ್ಕೆ ಹಾರಿಸಿಬಿಡಬೇಕು.

Scanned by CamScanner

3.58 ರಾಜ್ಯ/ ಸೇನೆ/ ಕೇಂದ್ರ ಅರೆ–ಸೇನಾ ಪಡೆಗಳಿಗೆ ಸಂಬಂಧಿಸಿದ ಅಂತ್ಯಕ್ರಿಯೆಯ ಸಂದರ್ಭದಲ್ಲಿ ಶವವಾಹನ ಇಲ್ಲವೇ ಶವಪೆಟ್ಟಿಗೆಯನ್ನು ಧ್ವಜದಿಂದ ಹೊದಿಸಬಹುದು. ಶವಪೆಟ್ಟಿಗೆ ಇಲ್ಲವೇ ಶವವಾಹನದ ಮುಂಭಾಗ/ ತಲೆಯ ಭಾಗಕ್ಕೆ ಕೇಸರಿ ಬಣ್ಣ ಬರುವಂತೆ ಧ್ವಜವನ್ನು ಹೊದಿಸಬೇಕಾಗುತ್ತದೆ. ಆದರೆ ಧ್ವಜವನ್ನು ಸಮಾಧಿ ಅಥವಾ ಚಿತೆಯಲ್ಲಿ ಸುಡಲು ಅವಕಾಶವಿರುವುದಿಲ್ಲ.

3.59 ರಾಜ್ಯದ ಮುಖ್ಯಸ್ಥರು ಇಲ್ಲವೇ ವಿದೇಶಿ ಸರ್ಕಾರದ ಮುಖ್ಯಸ್ಥರ ಮರಣದ ಸಂದರ್ಭದಲ್ಲಿ, ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಮಹಾತ್ಮ ಗಾಂಧಿಯವರ ಜಯಂತಿ, ರಾಷ್ಟ್ರೀಯ ಸಪ್ತಾಹ (6ರಿಂದ 13ನೇ ಏಪ್ರಿಲ್, ಜಲಿಯನ್ ವಾಲಾಬಾಗ್ ಹುತಾತ್ಮರ ಸ್ಮರಣೆಗಾಗಿ) ಅಥವಾ ಭಾರತ ಸರ್ಕಾರ ಸೂಚಿಸಿರುವ ನಮ್ಮ ತ್ರಿವರ್ಣ ಧ್ವಜವು ಉತ್ತುಂಗದಲ್ಲಿ ಹಾರಾಡುವಂತಹ ದಿನವಾಗಿದ್ದರೂ ಸಹ ಆ ದೇಶಕ್ಕೆ ಸಂಬಂಧಪಟ್ಟ ಭಾರತೀಯ ನಿಯೋಗವು ರಾಷ್ಟ್ರಧ್ವಜವನ್ನು ಅರ್ಧಕ್ಕೆ ಹಾರಿಸಬಹುದಾಗಿದೆ. ನಮ್ಮ ರಾಷ್ಟ್ರದ ಗಣ್ಯರ ಮರಣದ ಸಂದರ್ಭದಲ್ಲಿ ರಾಷ್ಟ್ರ ಹಬ್ಬಗಳ ದಿನದಂದು ರಾಷ್ಟ್ರಧ್ವಜವನ್ನು ನಿಯೋಗವು ಅರ್ಧಕ್ಕೆ ಹಾರಿಸುವಂತಿಲ್ಲ. ಆದರೆ ಸ್ಥಳೀಯ ಸಂಪ್ರದಾಯ ಅಥವಾ ಶಿಷ್ಟಾಚಾರದ (ಅಗತ್ಯಬಿದ್ದಲ್ಲಿ ರಾಜತಾಂತ್ರಿಕ ಮುಖ್ಯಸ್ಥರು ಗುರುತಿಸಿರುವ) ದ ಪ್ರಕಾರ ಆ ವಿದೇಶಿ ನಿಯೋಗದ ರಾಷ್ಟ್ರಧ್ವಜವನ್ನೂ ಆ ರಾಷ್ಟ್ರದಲ್ಲಿ ಅರ್ಧಕ್ಕೆ ಹಾರಿಸಿದ್ದ ಸಂದರ್ಭದಲ್ಲಿ ನಮ್ಮ ಧ್ವಜವನ್ನು ಅರ್ಧಕ್ಕೆ ಹಾರಿಸಬಹುದಾಗಿದೆ.

ಪುಟ ಸಂಖ್ಯೆ (01) ರಿಂದ (12) ರವರೆಗೆ
ಪರಿಶೀಲಿಸಿದೆ

ಸಂಪಾದಕರು, ಕರ್ನಾಟಕ ವಿಕಾಸ
ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾ[illegible]

Scanned by CamScanner